[ Govt. of Karnataka C.R.P. 67]

Deposition Sheets (RP.No.57) Form No.4

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 500/2023**

ಪಿ.ಡಬ್ಲ್ಯು ಃ 7 ಸಿ.ಡಬ್ಲ್ಯು ಃ 7

ಸಾಕ್ಷಿದಾರನ ಹೆಸರು ಃ ಚಂದ್ರಶೇಖರ್ ಪೂಜಾರಿ

ತಂದೆಯ ಹೆಸರು ಃ ಸೀನಾ ಪೂಜಾರಿ

ಪ್ರಾಯ ಃ 52 ವರ್ಷ

ಉದ್ಯೋಗ ಃ ಕೂಲಿ

ವಾಸ ಃ ಕಲ್ಯಾ

ದಿನಾಂಕ 19-05-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಚಾಸಾ 1 ರವರ ಪರಿಚಯ ಇದೆ. ದಿಃ 04-12-2022 ರಂದು ಕಾರ್ಕಳ ಗ್ರಾಮಾಂತರ ಪೋಲಿಸರು ನನಗೆ ನೋಟಿಸು ನೀಡಿ ತಕ್ಷೀರು ಸ್ಥಳವಾದ ಚಾಸಾ 1 ರವರ ಮನೆಗೆ ಪಂಚರಾಗಿ ಸಹಕರಿಸಲು ಕೋರಿರುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋಗಿದ್ದು, ಅಲ್ಲಿ ಕಳ್ಳತನವಾದ ಸ್ಥಳವನ್ನು ಯಾರು ತೋರಿಸಿರುತ್ತಾರೆ ಎಂದು ನೆನಪಿಲ್ಲ. ನನ್ನ ಜೊತೆ ಸದರಿ ಮಹಜರಿಗೆ ಚಾಸಾ 6 ಇದ್ದರು. ನಮ್ಮ ಸಮಕ್ಷಮ ಪೋಲಿಸರು ಸ್ಥಳ ಮಹಜರನ್ನು ಮಾಡಿ ಗೋಡರೆಜ್ ಒಳಗೆ ಇದ್ದ ಸಣ್ಣ ಬ್ಯಾಗ್, ಸಣ್ಣ ಸ್ಟಿಲ್ ಡಬ್ಬ ಸದರಿ ಬ್ಯಾಗ್ ಪಿಂಕ್ ಬಣ್ಣದಾಗಿತ್ತು, ಒಂದು ಬೀಗ ಅದನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ನಿಪಿ-2 ಮಹಜರಿಗೆ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ, ಅದನ್ನು ಈಗ ನಾನು ನೋಡಿ ಗುರುತಿಸಿದ್ದೇನೆ. ಸದರಿ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸ್ಥಳದಲ್ಲಿ ತಯಾರಿಸಿದ ನಿಪಿ-3 ನಕ್ಷೆಯಲ್ಲಿ ನಾನು ಸಹಿ ಮಾಡಿರುತ್ತೇನೆ. ಸದರಿ ಸಹಿಯನ್ನು ಈಗ ನಾನು ನೋಡಿ ಗುರುತಿಸಿದ್ದೇನೆ. ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಮ್ಮ ಸಮಕ್ಷಮ ಸ್ಥಳ ಮಹಜರು ಮಾಡುವಾಗ ಭಾವಚಿತ್ರವನ್ನು ತೆಗೆದಿರುತ್ತಾರೆ. ಈಗ ಸದರಿ 2

ಭಾವಚಿತ್ರ ನಿಪಿ-4 ಅನ್ನು ನೋಡಿ ಗುರುತಿಸಿದ್ದೇನೆ. ಈಗ ನೋಡಿದ ನಿಪಿ-21 ರಿಂದ 23 ಭಾವಚಿತ್ರದಲ್ಲಿ ಒಂದು ಸ್ಟಿಲ್ ಡಬ್ಬಿ ಒಂದು ಬೀಗ ಮತ್ತು ಒಂದು ಪಿಂಕ್ ಬಣ್ಣದ ಬ್ಯಾಗ್ ಇದೆ ಅದನ್ನು ನೋಡಿ ಗುರುತಿಸಿದ್ದೇನೆ.

ದಿಃ21-12-2022 ರಂದು ಪೋಲಿಸರು ನನ್ನನ್ನು ಠಾಣೆಗೆ ಬರಲು ಹೇಳಿದ್ದರು ಅದಂತರೆ ನಾನು ಠಾಣೆಗೆ ಹೋಗಿದ್ದೆ. ಅಲ್ಲಿ 2 ನೇ ಆರೋಪಿ ಮತ್ತು ಚಾಸಾ 8 ರವರು ಇದ್ದರು. ಪೋಲಿಸರು ಮಹಜರು ಮುಖೇನ 2 ನೇ ಆರೋಪಿಯ ಅಂಗಜಪ್ತಿ ಹಾಗೂ ಸ್ವತ್ತು ಸ್ವಾಧೀನತಾ ಮಹಜರು ಮಾಡಿ ಆರೋಪಿತೆಯ 1 ಮೊಬೈಲ್ ಪೋನ್ ಅನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ 8 ರವರು ಇದ್ದರು. ಸದರಿ ಮಹಜರಿಗೆ ನಾನು ಸಹಿಯನ್ನು ಹಾಕಿದ್ದೇನೆ. ಈಗ ಸದರಿ ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದರಿ ಮಹಜರನ್ನು ನಿಪಿ-29 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗರುತಿಸಲಾಯಿತು. ಈಗ ನನಗೆ ತೋರಿಸಿದ ಭಾವಚಿತ್ರದಲ್ಲಿ ಸದರಿ ವೊಬೈಲ್ ಇದೆ ಅದನ್ನು ಈಗ ನಿಪಿ-32 ಎಂದು ಗುರುತಿಸಲಾಯಿತು.

ಅದೇ ದಿನ 2 ನೇ ಆರೋಪಿತೆಯ ಮನೆಗೆ ಸ್ವತ್ತು ಸ್ವಾಧೀನತಾ ಮಹಜರಿಗೆ ನಾನು ಮತ್ತು ಚಾಸಾ 8 ರವರು ಹೋಗಿರುತ್ತೇವೆ. ಅಲ್ಲಿ ಆರೋಪಿತೆಯಿಂದ 1 ಚಿನ್ನದ ಬಳೆಯನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಅಲ್ಲಿ ಮಾಡಿದ ಸ್ವತ್ತು ಸ್ವಾಧೀನತಾ ಮಹಜರಿಗೆ ನಾನು ಸಹಿಯನ್ನು ಹಾಕಿರುತ್ತೇನೆ. ಈಗ ಸದರಿ ಮಹಜರನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದೇನೆ. ಸದರಿ ಮಹಜರನ್ನು ನಿಪಿ-30 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-30(ಎ) ಎಂದು ಗರುತಿಸಲಾಯಿತು. ಸದರಿ ವೇಳೆಯಲ್ಲಿ ಭಾವಚಿತ್ರವನ್ನು ತಗೆದಿರುತ್ತಾರೆ. ಅದನ್ನು ಈಗ ನೋಡಿ ಗುರುತಿಸಿರುತ್ತೇನೆ. ಸದರಿ ಭಾವಚಿತ್ರವನ್ನು ನಿಪಿ-31 ಎಂದು ಗರುತಿಸಲಾಯಿತು.

ನ್ಯಾಯಾಲಯದ ಮುಂದೆ ತೋರಿಸಿದ ಮು ಮಾ 1 ರಿಂದ 4 ಅನ್ನು ನೋಡಿ ಗುರುತಿಸಿದ್ದೇನೆ.

<u>ಪಾಟೀ ಸವಾಲು ಃ ಆರೋಪಿಗಳ ಪರಃ ಶ್ರೀ ಎಸ್ ಕೆ ವಕೀಲರಿಂದಃ</u>

ಚಾಸಾ 1 ಮತ್ತು 2 ನನಗೆ ಮೊದಲಿನಿಂದಲೂ ಪರಿಚಯ. ಚಾಸಾ 2 ರವರನ್ನು ನಾನು ಪೋನ್ ಮಾಡಿ ನನ್ನ ಜೊತೆ ನ್ಯಾಯಾಲಯಕ್ಕೆಬರಲು ಕರೆದಿರುವುದಕ್ಕೆ ಬಂದಿರುತಾರೆ.

ಅವರು ಈಗಲೂ ಸಹ ನ್ಯಾಯಾಲಯದ ಹೊರಗೆ ಇದ್ದು. ನಾನು ಬರುವುದನ್ನು ಕಾಣುತ್ತಿದ್ದಾರೆ. ನಾನು 7 ನೇ ತರಗತಿವರೆಗೆ ಓದಿರುತ್ತೇನೆ. ನಾನು ನ್ಯಾಯಾಲಯಕ್ಕೆ ಮೊದಲ ಬಾರಿಗೆ ಬರುತ್ತಿದ್ದು ಚಾಸಾ 2 ರವರಲ್ಲಿ ನ್ಯಾಯಾಲಯದಲ್ಲಿ ಹೇಗೆ ಉತ್ತರಿಸಬೇಕು ಎಂದು ಕೇಳಿಕೊಂಡಿದ್ದೇನೆ. ಈ ಪ್ರಕರಣದ ದಿನಾಂಕಗಳು ನ್ಯಾಯಾಲಯಕ್ಕೆ ಬಂದು ಗೊತ್ತಾಗಿರುತ್ತದೆ. ನನಗೆ ನಾನು ಹುಟ್ಟಿದ ದಿನಾಂಕ ಗೊತ್ತಿಲ್ಲ. ಕಳ್ಳತನ ಯಾವ ದಿನಾಂಕ ನಡೆಯಿತು ಎಂದು ನನಗೆ ಗೊತ್ತಿಲ್ಲ.

ಚಾಸಾ 1 ರವರ ಮನೆಗೆ ಬೆಳಿಗ್ಗೆ 9.00 ಗಂಟೆಗೆ ಪೋಲಿಸರು ಹೋಗುವುದನ್ನು ನೋಡಿ ಅಲ್ಲಿಗೆ ನಾನು ಮತ್ತು ನನ್ನ ಹೆಂಡತಿ ರೇಣು ಹೋಗಿರುತ್ತೇವೆ. ನಾನು ಚಾಸಾ 1 ರವರ ಮನೆಗೆ ಬೆಳಿಗ್ಗೆ 10.00 ಗಂಟೆಗೆ ಮನೆಯ ಒಳಗೆ ಹೋಗಿರುತ್ತೇನೆ. ನಾವು ಹೋಗುವ ಮುಂಚೆ ಅಲ್ಲಿ ಸುಮಾರು ಜನ ಇದ್ದರು. ಅವರು ಯಾರು ಎಂದು ನನಗೆ ಹೇಳಲು ಆಗುವುದಿಲ್ಲ.

ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷದಂತೆ ಮು ಮಾ 1 ರಿಂದ 4 ಎಲ್ಲಿ ಬಿದ್ದಿದ್ದವು ಎಂದು ಹೇಳಲಾಗುವುದಿಲ್ಲ. ಕಳ್ಳತನ ಯಾವ ಕೋಣೆಯಲ್ಲಿ ಆಗಿದೆ ಎಂದು ನನಗೆ ಗೊತ್ತಿಲ್ಲ. ಆದರೆ ಮು ಮಾ 3 ಅಂಗಳದಲ್ಲಿ ಬಿದ್ದಿತ್ತು. ಪೋಲಿಸರು ನನ್ನಿಂದ ಸಹಿಯನ್ನು ಪಡೆದುಕೊಂಡು ಹೋಗಿರುತ್ತಾರೆ, ಅದರಲ್ಲಿ ಏನೂ ಬರೆದಿರುತ್ತದೆ ಎಂದು ನಾನು ಓದಿರುವುದಿಲ್ಲ ಮತ್ತು ತಿಳಿದುಕೊಂಡಿರುವುದಿಲ್ಲ. ನಾನು ಸಹಿ ಹಾಕಿದ ಕೂಡಲೇ ಅಲ್ಲಿಂದ ಹೋಗಿರುತ್ತೇನೆ. ಆ ನಂತರ ಏನಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಚಾಸಾ 2 ಚಾಸಾ 1 ರವರ ಗಂಡ ಹಾಗೂ 2 ನೇ ಆರೋಪಿತೆಯ ಸಂಬಂಧಿಕರು.

ಚಾಸಾ 1 ರವರ ಮನೆ ಯಾವ ದಿಕ್ಕಿನಲ್ಲಿ ಇದೆ ಎಂದು ಗೊತ್ತಿಲ್ಲ. ಸುಮಾರು 10 ಜನ ಪೋಲಿಸರು ಬಂದಿದ್ದರು. ನಾನು ಮರುದಿನ ಪೋಲಿಸ್ ಠಾಣೆಗೆ ಹೋಗಿರುತ್ತೇನೆ. ಅಲ್ಲಿ ಪೋಲಿಸರು ನನ್ನ ಎರಡು ಸಹಿಗಳನ್ನು ಪಡೆದುಕೊಂಡಿರುತ್ತಾರೆ. ಅದರಲ್ಲಿ ಏನೂ ಬರೆದಿರುತ್ತಾರೆ ಎಂದು ಗೊತ್ತಿಲ್ಲ. ಆ ದಿನ ಪೋಲಿಸ್ ಠಾಣೆಯಲ್ಲಿ ನಾನು ಮತ್ತು ಚಾಸಾ8 ಸುರೇಶ್ ಶೆಟ್ಟಿ ಇದ್ದೇವು. ನಿಪಿ-32 ಮೊಬೈಲ್ ಯಾವ ಕಂಪನಿಯದ್ದು, ಯಾವ ಬಣ್ಣದು ಎಂದು ಗೊತ್ತಿಲ್ಲ. ಅಲ್ಲಿ ಒಬ್ಬರೇ ಪೋಲಿಸರು ಇದ್ದರು. ಪೋಲಿಸ್ ಠಾಣೆಯಲ್ಲಿ ಸುಮಾರು 15 ನಿಮಿಷಗಳ ಕಾಲ ಇದ್ದೆ. ಅಲ್ಲಿ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ.

ಪೋಲಿಸರು ನಮ್ಮನ್ನು 2 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ನಾನು ಅವರ ಮನೆಯ ಕಂಪೌಂಡ್ ಒಳಗೆ ಹೋಗಿರುವುದಿಲ್ಲ, ನಾನು ನಿಪಿ-31 ಕ್ಕೆ ಭಾವಚಿತ್ರಕ್ಕೆ ನಿಂತಿದ್ದೇನೆ. ಪೋಟೋಗೆ ನಿಂತಿರುವುದು ಬಿಟ್ಟು ಬೇರೆ ಯಾವ ವಿಷಯವೂ ಗೊತ್ತಿಲ್ಲ. ನನ್ನ ಸಮಕ್ಷಮದಲ್ಲಿ ಪೋಲಿಸರು ಬಳೆಯನ್ನು ವಶಪಡಿಸಿಕೊಂಡಿರುತ್ತಾರೆ. ನಾನು ಅಂಗಳದಲ್ಲಿ ಇದ್ದೆ, 2 ನೇ ಆರೋಪಿಗೆ ಮನೆಯ ಒಳಗೆ ಹೋಗಿ ಬಳೆಗಳ್ನು ತಂದು ಕೊಟ್ಟರು. ಎಷ್ಟು ಬಳೆ ಎಂದು ನನಗೆ ಗೊತ್ತಿಲ್ಲ. ಅದೇ ರೀತಿ ನಿಪಿ-30 ರಲ್ಲಿ ಏನೂ ಬರೆದಿದೆ ಎಂದು ಗೊತ್ತಿಲ್ಲ. ನಾನು ಓದಿಲ್ಲ ಅದನ್ನು ನನಗೆ ಪೋಲಿಸರು ಹೇಳಿಲ್ಲ.

ನಾನು ಸ್ಥಳ ಮಹಜರಿಗೆ ಹೋಗಿರುವುದಿಲ್ಲ, ಸ್ಥಳದಲ್ಲಿ ಮಹಜರನ್ನು ಮಾಡಿರುವುದಿಲ್ಲ, ಪೋಲಿಸ್ ಠಾಣೆಗೆ ಹೋಗಿರುವುದಿಲ್ಲ, ಅಲ್ಲಿ 2 ನೇ ಆರೋಪಿತೆಯ ಅಂಗ ಜಪ್ತಿ ಹಾಗೂ ಸ್ವತ್ತು ಸ್ವಾಧೀನತಾ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಚಾಸಾ 2 ರವರು ಹೇಳಿಕೊಟ್ಟ ಹಾಗೇ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ

ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಮು ಮಾ 1 ರಿಂದ 4 ನೋಡಿದ್ದು ಇಲ್ಲ ಮತ್ತು ಅವುಗಳಿಗೂ ಆರೋಪಿಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 1 ಮತ್ತು 2 ಹಾಗೂ 2 ನೇ ಆರೋಪಿತೆ ಮತ್ತು ಅವರ ಗಂಡ ಅವರ ನಡುವೆ ವೈಮನಸ್ಸು ಇದೆ ಎಂದರೆ ಸರಿಯಲ್ಲ. ಆ ಕಾರಣದಿಂದ ಚಾಸಾ 1 ರವರು ಆರೋಪಿಗಳ ವಿರುದ್ಧ ಸುಳ್ಳು ದೂರನ್ನು ದಾಖಲು ಮಾಡಿದ್ದಾರೆ ಎಂದರೆ ಸರಿಯಲ್ಲ. ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ